ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

Regd No M 1299 34 th Year ತಾ: 24-1-51

ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ೦. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಗೋ ರ ಕ್ಷ
| ತಿಂಗಳಿಗೊಂದಾವರ್ತ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ

Protect the Cow
ಗೋರಕ್ಷಣೆ ಸಜೆಯುಲಿ

ದಿವ್ಯವಾಣಿ

ಹುಲಿಹುಸ್ಸು ಮಾನವನು ಕೊಂದರೆ ಅದೊಂದು ಆಟವೆನಿಸುವುದು ; ಅದೇ ಹುಲಿಯು ಮನುಷ್ಯನನ್ನು ಕೊಂದರೆ ಕ್ರೌರ್ಯವೆನಿಸುವುದು.

— ಬರ್ನಾರ್ಡ್ ಷಾ

ಆಹಾರ ಧಾಳಿ ಪಕ್ಷದವರು ಚಾವು, ಅಬ್ದುಲ್ ಖಬ್ಬಾರ್, ನಂಜಮ್ಮ, ಸಿದ್ಧಮ್ಮ ಇತ್ಯಾದಿಯವರು ಅಪ್ಪಣೆ ಚೀಟಿ ಇಲ್ಲದೆ ನೂರೊಂದು ಸೇರು ಭತ್ತ, ಇಪ್ಪತ್ತಾಲ್ಕು ಸೇರು ಅಕ್ಕಿ ಕದ್ದುತ್ತಿದ್ದುದನ್ನು ಪತ್ತೆ ಹಚ್ಚಿ ಮೊಕದ್ದಮೆ ಹೂಡಿರುವರು.

ಭಾರತ ಸಮಾಜವಾದಿ ಧುರೀಣ ಶ್ರೀ ಜಯಪ್ರಕಾಶನಾರಾಯಣರು ಮದರಾಸಿನಲ್ಲಿ ಭಾಷಣ ಮಾಡುತ್ತಾ, ಆಹಾರ ಪಡಿತರ ಹೋತಾ ಮಾಡಿದ ಬಗ್ಗೆ ಭಾರತ ಸರ್ಕಾರದ ನೀತಿಯನ್ನು ಖಂಡಿಸಿದರು.

ಸರ್ಕಾರವೇ ಅನ್ನ ನೀಡಲಿ, ಭೂಮಿ ಉಳುವವನಿಗೆ ದೊರೆಯಲಿ, ಜೋಡಿ ಇನಾಂ ಪದ್ಧತಿ ರದ್ದಾಗಲಿ ಎಂದು ಕೋಲಾರದ ಇನ್ನೂರು ದೃತರು ಮೊನ್ನೆ ಬೆಂಗಳೂರು ಅಡಾರಾ ಕಚೇರಿ ಮುಂದೆ ಪ್ರದರ್ಶನ ನಡೆಸಿದರು. ಪ್ರಧಾನಿ ಶ್ರೀ ಕೆ. ವಿ ರೆಡ್ಡಿಯವರು ಪ್ರದರ್ಶನಕಾರರ ಧುರೀಣರಿಗೆ ಬಂದ ಶಾಸನ ಸಭೆ ಅಧಿವೇಶನದಲ್ಲಿ ಮನಸ್ಸಾದೆ ಮಂಡಿಸುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

ಮೈಸೂರು ಪ್ರಾಂತದಲ್ಲಿ ಏಕಕಾಲಕ್ಕೆ ಫೆಲ್ಲಗ್ರಾ ಫ್ಲಾಂಡೇಷನ್‌ನ ಅಂತರಾಷ್ಟ್ರೀಯ ಆರೋಗ್ಯ ವಿಭಾಗದವರು ಮಲೇರಿಯಾ ನಿರೋಧ ಬಗೆಗೆ ಯೋಜನೆಯೊಂದನ್ನು ತಯಾರಿಸಿರುವುದಾಗಿ ನ್ಯೂಯಾರ್ಕಿನವರಿಂದ.

ಇದುವರಿಗೆ ಭಾರತ ಸರ್ಕಾರದ ಉದ್ಯೋಗಿಗಳಿಗೆ ವರ್ಷಕ್ಕೆ ಇಪ್ಪತ್ತು ದಿನ ಕ್ಯಾಷುಯಲ್ ರಜವಿತ್ತು. ಈಗದು ಹದಿನೈದು ದಿವಸಗಳಿಗಿಳಿದಿದೆಯೆಂದು ದೆಹಲಿ ವಾರ್ತೆ.

ವೃತ್ತಾಂತ ಸಂಗ್ರಹ.

ಈ ದಿನ ರಾತ್ರಿ 8 ವರೆ ಗಂಟೆಗೆ ಪ್ರಧಾನಿ ನೆಹರು ದಿಲ್ಲಿ ರೇಡಿಯೋ ಕೇಂದ್ರದಿಂದ ಭಾಷಣ ಮಾಡಲಿದ್ದಾರು.

2 ವರೆ ಲಕ್ಷ ಮಂದಿ ಸೇನೆಗೆ ಸೇರಲು ಮುಂದೆ ಬಂದಿರುವುದಾಗಿ ಕೇಂದ್ರ ಚೀನಾದ ಪೀಕಿಂಗ್ ರೇಡಿಯೋ ಸಾರಿದೆ

ಸೇವಾದಳದ ಧುರೀಣ ಶ್ರೀ ಬಾಪೂಜಿಯವರ ಚಿತ್ರವನ್ನು ಬಸವಯ್ಯನವರು ಹೇಳಿಕೆಯೊಂದಿಗೆ ದಸ್ತಿತ್ತು ದಿನ್ನಾಗಲೆ ಥಕ್ಕರ್‌ಬಾಪಾರವರ ಸೇವಾ ಪ್ರಶಂಸ ಮಾಡಿದ್ದಾರೆ

ಈ ವರ್ಷಕ್ಕೆ ಭಾರತ-ಪೋಲೆಂಡು ಗಳಲ್ಲಿ ವ್ಯಾಪಾರ ಒಪ್ಪಂದ ನಡೆದಿದೆಯೆನ್ನುವುದು ಲಂಡನ್ ವಾರ್ತೆ.

ಏಶ್ಯ ಒಲಂಪಿಕ್ ಪಂದ್ಯ ದೆಹಲಿಯಲ್ಲಿ 60 ನೇ ಇಸವಿಯಲ್ಲಿ ಜರುಗಬಹುದೆಂದು ವಾರ್ತೆ.

ಮದರಾಸು ಪ್ರಾಂತದಲ್ಲಿ ಈ ವರ್ಷ ಹದಿಮೂರುವರೆ ಲಕ್ಷ ಟನ್ ಬೆಳೆ ಕಡಿಮೆ ಬಿದ್ದಿರುವುದಾಗಿ ನಂದಿಯಾಗಿದೆ.

ಮಧ್ಯಪಾನ ನಿರೋಧ ಕಮಿಷನಂನ್ನಾಗಿ ಐ. ಜಿ. ಪಿ ಗಳಿಗೆ ಅಧಿಕಾರ ಕೊಡಲಾಗಿದೆ

ಮೈಸೂರು ಆಕಾಶವಾಣಿಯಿಂದ ಶ್ರೀಮನ್ಮಹಾರಾಜರು 26 ನೇ ತಾ || ರಾತ್ರೆ 8 ಗಂಟೆಗೆ ರಿಪಬ್ಲಿಕ್ ದಿನಾಚರಣೆ ಸಂಬಂಧದಲ್ಲಿ ಭಾಷಣ ಮಾಡುವರು

ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರಂನ ೫ ನೇ ವಾರ್ಷಿಕೋತ್ಸವವು ಮೈಸೂರು ಸರ್ಕಾರದ ಡಿ ಪಿ ಐ ರವರಾದ ಶ್ರೀ ಕೆ ಗುರುದತ್ ಬಿ ಎ ರವರ ಅಧ್ಯಕ್ಷತೆಯಲ್ಲಿ ಮೈಸೂರು ಸಹಕಾರ ಸಂಘ ಭವನದಲ್ಲಿ 31 ನೇ ತಾ|| ಸಂಜೆ 6 ಗಂಟೆಗೆ ನೆರವೇರುವದು

ನೇಪಾಳಿ ಯಾದವೀ ಕಲಹ ಮುಂದುವರಿಯುವುದು?

ನೇಪಾಳ ಕಾಂಗ್ರೆಸಿನಲ್ಲಿ ಒಡಕ್ಕುಂಟಾಗಿದೆಯೆಂದೂ ಮುಂದು ಸೇನಾಪತಿ ಕರೆ ತಿಂಸ್ಥೆ ಬೃಹತಾಗಬಹುದೆಂದೂ ದಿಲ್ಲಿ ವಾರ್ತೆ

ಬೆಂಗಳೂರಿನಲ್ಲಿ ಸರ್ವರೋಗ ನಿವಾರಕ

ರಾಜಾಜಿ ನಗರದಲ್ಲಿ ವಿಶಾಲವಾದ ಸೊಬ್ಬು ತೆಲದಿ ದಿಗಣಪತಿ ತಿರುವನಂತೆ

ಮೈಸೂರು ನಗರದ ಪೌರಸಭೆ ಅಧ್ಯಕ್ಷರುಗಳ ಸಭೆ ; ಸರ್ವರೂ ರಾಜಿಮಾಡಿಸಬೇಕೆಂದು ಪುರಸಭಾಧ್ಯಕ್ಷರು ಕೋರಿದ್ದಾರೆ

ಶ್ರೀ ಎಸ್ ಸುಬ್ರಹ್ಮಣ್ಯರಾವ್ ಎಂಬ ಬೆಂಗಳೂರು ನಗರ ರೈಲ್ವೆ ಸ್ಟೇಷನ್ ಪಾರ್ಸಲ್ ಆಫೀಸ್ ಗುಮಾಸ್ತನನ್ನು ಬಂಧಿಸಲಾಗಿದೆ ಮೋಸದ ಅಭ್ಯೋಪನೇ ಕಾರಣ

ಮೊನ್ನೆ ಮೊನ್ನೆ ಕಲ್ಕತ್ತಾದಿಂದ ಬೆಂಗಳೂರಿಗೆ ಬಂದ ವಿಮಾನ ಸ್ವಲ್ಪ ಅಪಘಾತಕ್ಕೀಡಾಯಿತು ಅದೇ ವಿಮಾನದಲ್ಲಿ ಸಂ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಬೆಂಗಳೂರಿಗೆ ಆಗಮಿಸಿದರು

ನ್ಯೂಗಿನಿಯಾದ ಅಗ್ನಿಪರ್ವತ ಮೊನ್ನೆ ಸ್ಫೋಟಿಸಿ ನಾಲ್ಕು ಸಹಸ್ರ ಮಂದಿಯ ಜೀವ ಹೋಗಿರುವ ಅಂದಾಜಾಗಿದೆ ಅದರ ಹೆಸರು ಲ್ಯಾಮಿಂಗ್ಟನ್ ಅಗ್ನಿ ಪರ್ವತ

ಪರರಾಷ್ಟ್ರಗಳಿಂದ ಆಹಾರ ಆಮದು ಮಾಡಿಕೊಳ್ಳಲು 6 ಹಡಗುಗಳನ್ನು ಭಾರತ ಸರ್ಕಾರ ಕೊಳ್ಳಲಿದೆಯೆಂದು ದೆಹಲಿ ವಾರ್ತೆ

ಭಾರತ ಸರ್ಕಾರದ ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಹೇಳಿಕೆಯಿತ್ತು ಹೈದರಾಬಾದಿನ ತೆಲಂಗಾಣ ಪ್ರದೇಶದ ಸ್ಥಿತಿ ಸುಧಾರಿಸುತ್ತಿದೆ ಎಂದು

ಬೊಂಬಾಯಿನಲ್ಲಿ ನಿನ್ನೆ ದಿನದ ಪತ್ರಿಕಾ ಪತ್ರಿಕೆಯಲ್ಲಿ ಸ್ವತಂತ್ರ ಫಕೂನಿಸ್ಟ್ ಚಳವಳಿ ನಾಯಕರು ಮಾತನಾಡುತ್ತಾ ಪಾಕಿಸ್ತಾನದ ಭಯೋತ್ಪಾದಕ ಅಡಳಿತೆಗಳನ್ನು ನಿರ್ಮೂಲ ಮಾಡಲು 80 ಸಾವಿರ ಫಕೂನಿಗಳು ದೃಢ ನಿಶ್ಚಯ ಮಾಡಿದ್ದಾರೆ – ಎಂದರು

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ನಿನ್ನೆ ದಿವಸ ಮೈಸೂರು ಪ್ರಿವೆಂಷನ್ ಆಫ್ ಅಡಲ್ಟರೇಷನ್ (ತಿದ್ದುಪಡಿ) ಮಸೂದೆ ಅಂಗೀಕೃತವಾಯಿತು

ನಿನ್ನೆ ದಿವಸ ಬ್ರಿಟಿಷ್ ಸರ್ಕಾರ ಕೊರಿಯ ಸಮರ ಸಮಸ್ಯೆಗೆ ಚೀನದಿಂದ ಬಂದ ಸಲಹೆಗಳನ್ನು ಪರೀಶೀಲಿಸಿತು

ಕಾಶಿ ಹಿಂದು ವಿಶ್ವವಿದ್ಯಾನಿಲಯದಲ್ಲಿ ನಡೆದ ಅಲಹಾಬಾದ್ ವಿಶ್ವವಿದ್ಯಾನಿಲಯದ ಅಕ್ಷಾಡೆಮಿಯ ಅಫ್ ಸ್ಟೇಸಸ್‌ನ 20 ನೆ ವಾರ್ಷಿಕಾಧಿವೇಶನದಲ್ಲಿ ಭಾಷಣ ಮಾಡುತ್ತಾ ಡಾ|| ಮೆಹ್ತಾರು ಮನುಷ್ಯನ ಮಾಂಸಪುಂಜ ಮಂಗನಲ್ಲ – ಎಂದರು

ಕಲ್ಕತ್ತದಲ್ಲಿ ನಿನ್ನೆ ನೇತಾಜಿ ಸುಭಾಷರ ವರ್ಧಂತಿ ವೈಭವದಿಂದ ನಡೆಯಿತು

ಕಳೆದ 3 ವಾರಗಳಿಂದ ಹೊಂದಿಕೊಂಡ ಇನ್ಫ್ಲುಯೆಂಜದಿಂದ ಸಾವಿರದ ನಾನೂರು ಮಂದಿ ಸತ್ತಿರುವುದಾಗಿ ಲಂಡನ್ ವರದಿ

ಪಂ|

ಅ ಹಾ ರ ವ್ಯೂ, ಕಾ ಂ ಗ್ರೆ ಸ್ಸೂ ನ

(ಮುಂದುವರಿದುದು)

ಜಾತಿ ಮತ ಭೇದಗಳಿರಕೂಡದೆಂದೂ; ಕುಲ ಭೇದಗಳನ್ನು ತಪ್ಪಿಸಬೇಕೆಂದೂ ಶ್ರೀ ಗಾಂಧಿಯವರು ಮಾಡಿದ ಬೋಧೆಗೆ ಅರ್ಥವು ಆಹಾರದಲ್ಲಿರುವುದೇನು ಅಂದುಕೊಳ್ಳುವುದು ಕಾಂಗ್ರೆಸ್ಸಿನವನೆಂದು ಹೇಳಿಕೊಳ್ಳುವವನ ತಪ್ಪು. ಇಂದಿನ ಸರ್ಕಾರವು ಜಾತ್ಯತೀತ ಸಂಸ್ಥಾನವೆಂದೂ, ಇದರಲ್ಲಿ ಜಾತಿ ಮತ ಭೇದಗಳಿಲ್ಲವೆಂದೂ ಹೇಳಿದ ಮಾತಿಗೆ ಅರ್ಥವು ತಿಂಡಿಯುಲ್ಲಿದೆಯೇ ? ಜಾತಿಮತವನ್ನನುಸರಿಸಿಯಾಗಲೀ ಸ್ತ್ರೀಪುರುಷಭೇದವಿರುವದೆಂದಾಗಲೀ ಸರ್ಕಾರವು ಲಕ್ಷಿಸುವುದಿಲ್ಲ ದಿಲ್ಲವೆಂದೂ, ಎಲ್ಲರ ವಿಷಯದಲ್ಲಿಯೂ ರಾಜ್ಯ ಸಂಬಂಧ ವಿಚಾರಗಳಲ್ಲಿ ಅಭೇದ ಪ್ರತಿಪತ್ತಿ ಇರುವುದೆಂದೂ ತಿಳಿಸಿರುವ ವಿಷಯವನ್ನು ಗ್ರಹಿಸದೆ, ಪ್ರತಿ ಒಂದಕ್ಕೂ, ಪ್ರತಿ ಅನೀತಿ ಕಾರ್ಯಕ್ಕೂ, ಪ್ರತಿ ದುರ್ವರ್ತನೆಗೂ, ಕಾಂಗ್ರೆಸ್ಸಿನ ಹೆಸರು ಹೇಳಿ ಇಂಥಾ ಲೋಪಗಳನ್ನು ಬಯಸುವವರು ಜಂಭವನ್ನು ಕೊಚ್ಚಿಕೊಳ್ಳುವಿಕೆಯೂ, ಕದಿತರರು ಇದೆಲ್ಲವೂ ಕಾಂಗ್ರೆಸ್ಸಿನಿಂದ ಎರ್ಪಟ್ಟಿದ್ದೆಂದು ದೂಷಿಸುವಿಕೆಯೂ ಕಾಣಬರುತ್ತಿದೆ.

ಕಾಂಗ್ರೆಸ್ಸು ಸಂಸ್ಥೆಯಲ್ಲಿಯೂ, ಕಾಂಗ್ರೆಸ್ಸು ಸೇವೆಯನ್ನು ಮಾಡುವ ಪವಿತ್ರ ವ್ಯಕ್ತಿಗಳಲ್ಲಿಯೂ ಮೇಲ್ಕಂಡ ಲೋಪಗಳುಇದ್ದೇ ಇರಬೇಕೆಂದು ಎಲ್ಲೂ ಶಾಸನ ಮಾಡಿರುವುದಿಲ್ಲ. ಯಾರಾರಿಯಾರ ಪದ್ಧತಿಗಳಲ್ಲಿ ಅವರ ಗೃಹಗಳಲ್ಲಿ ಅವರಿದ್ದು ದೇಶಸೇವಾ ಕಾರ್ಯಗಳನು ನಡೆಸುತ್ತಿರತಕ್ಕದ್ದು. ಹೊರಗೆ ಜಾತಿ ಮತ ಕಾರಣಗಳಿಂದ ಹೆಚ್ಚುಕಡಿಮೆಗಳನ್ನು ನೋಡಿಸುತ್ತಾ ಇರಕೂಡದೆಂಬುದೇ ಕಾಂಗ್ರೆಸ್ಸಿನ ಬೋಧೆಯಾಗಲೀ ಬೇರೆಯಲ್ಲ. ಅದ್ದರಿಂದ ಧೈರ್ಯವನವಲಂಬಿಸಿ ತಮ್ಮನು ಪರಿವೇಷ್ಟಿಸಿರುವ ಸ್ನೇಹಬ್ಯಂದದಲ್ಲಿ ತಮ್ಮ ಪದ್ಧತಿಗಳನು ಸಿಲ್ಲಿಸಿಕೊಳ್ಳಲಾರದೆ ದಾಸಂತಾಗುವಂಥವರಿಗೆ ಒಳಗೊಳಗೇ ಚಿಂತೆಯಿಂದ ಕೂಡಿದವಂತಾಗಿ ಬಾಧೆಪಡುವಿಕೆಯು ಕಾಣಬರುತ್ತಿದೆ ; ಇದು ಮಾನವರ ವ್ಯಕ್ತಿತ್ವ ಪರಿಜ್ಞಾನದಲ್ಲಿರುವ ಒಂದು ದೊಡ್ಡ ಲೋಪವಾಗಲೀ ಕಾಂಗ್ರೆಸ್ಸನು ದೂರುವದು ಅಸಮಂಜಸವಾದದ್ದು.

ಮಹಾಪವಿತ್ರವಾದ ಆ ಸಂಸ್ಥೆಯಲ್ಲಿ ತ್ಯಾಗಮಾಡಲೆಳಸಿ ತ್ಯಾಗಮಾಡಲಾಗದೆ ಹೊರಗೆ ಜೋಲಾಡುತ್ತಿದ್ದು ಇಂದು ತಮ್ಮ ಈರ್ಷ್ಯೆ ಮತ್ಸ್ಯ ಅಸೂಯೆಗಳನ್ನು ಪ್ರಕಟಿಸಿಕೊಳ್ಳಲೆಳಸಿ ಪ್ರವರ್ತಿಸುವವರಿಗೆ ಯಾವ ಹೇಳಬಲ್ಲರು ?

(ತ್ರಿ)

New Opera—

Shows stopped for Renovation

ರಣಜಿತ್ ಯಶಸ್ವಿ 2 ನೇ ವಾರ

Nirala ನಿ ರಾ ಲ

ಪಾತ್ರ— ಮಧುಬಾಲಾ, ದೇವಾನಂದ, ಯಾಕೂಬ್, ಮಜಂ ಖಾಕ್

ಇತರ ಚಿತ್ರಗಳಲ್ಲಿ ಕಾಣದಿರುವ ಅನೇಕ ಸನ್ನಿವೇಶಗಳು ಈ ಹಿಂದಿ ಚಿತ್ರದಲ್ಲಿವೆ

ಪ್ರತಿ ದಿನ 3 ಪ್ರದರ್ಶನಗಳು

ಮುಂದಿನ ಬದಲಾವಣೆ ಜಲ್ತೆ ದೀಪ್ ಪಾತ್ರ—ನಿಮ್ಮಿ, ಕುಲದೀಪ್

ಬೆಳಗಿನ ಪ್ರದರ್ಶನ — 26—1—51 ರಿಂದ — 3 ದಿನಗಳು

ಸೂರ್ಯಮುಖಿ ಪಾತ್ರವಹಿಸಿರುವ ಸುಂದರ ಹಿಂದಿ ಚಿತ್ರ — ನಾ ಟಿ ಕ್

Printed and Published by M. S. Krishna Rao, at the Lakshmipuram Mysore

ಉಡ್‌ಲಾಂಡ್ಸ್

ಜಯಪ್ರದ 2 ನೇ ವಾರ

ವೀರ ಬಬ್ರುವಾಹನ

ಶಶಿಕಪೂರ್, ಮೃದುಲ್, ಜಾನಕಿದಾಸ್ ಅಭಿನಯಿಸಿರುವ ಅಮೋಘ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 26—1—51 ರಿಂದ 3 ದಿವಸಗಳು

ತ್ರಿಲೋಕ ಕಪೂರ್, ಮಜರ್ ಖಾನ್, ಜೇವಿಡ್ ಅಭಿನಯಿಸಿರುವ

ಸೊಬಗಿನ ಹಿಂದಿ ಚಿತ್ರ — ರಾ ಜ ರಾ ಣಿ

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

For Quality Printing

L. N. Press

Sivarampet, Mysore



ನ್ಯೂಯಾರ್ಕಿನಲ್ಲಿರುವ ವಿಶ್ವಸಂಸ್ಥೆ ಕಚೇರಿ ಕಟ್ಟಡ